**ದಿನಾಂಕಃ 11.07.2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲು: ಶ್ರೀ ಜಿ.ಎಸ್., ಪ್ರತಿವಾದಿ ಪರ ವಕೀಲರಿಂದ**

8. ಈಗ ನೋಡುತ್ತಿರುವ ಛಾಯ ಚಿತ್ರದಲ್ಲಿ ಕಾಣಿಸುವ ಕಲ್ಲು ಬಂಡೆಗಳನ್ನು ಪ್ರತಿವಾದಿ ಹೊನ್ನಮ್ಮ ತನ್ನ ಪ್ರತಿವಾದ ಪತ್ರ ಸ್ವತ್ತನ್ನು ಖರೀದಿಸುವ ಪೂರ್ವದಲ್ಲಿಯೇ ಅದರ ಮೂಲ ಮಾಲೀಕರಾದ ಸುಬ್ಬರಾವ್ ಬಿನ್ ಕೃಷ್ಣರಾವ್ ಮಣ್ಣಿನಲ್ಲಿ ಊತ್ತಿದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಛಾಯ ಚಿತ್ರದಲ್ಲಿ ಕಾಣಿಸುವಂತೆ ಇಟ್ಟಿಗೆ ಗೋಡೆ, ಕಲ್ಲು ಬಂಡೆಗಳು ಮತ್ತು ಮಧ್ಯದಲ್ಲಿ ರಾಗಿ ಮರ(ನೆರಳು ಮರ) ಇರುವುದು ನಿಜ ಎಂದು ನುಡಿಯುತ್ತಾರೆ. ಸಾಕ್ಷಿಯು ಛಾಯ ಚಿತ್ರವನ್ನು ನೋಡಿ ಗುರುತಿಸಿದ ಸದರಿ ಛಾಯ ಚಿತ್ರವನ್ನು ನಿ.ಡಿ.1 ಅಂತ ಗುರುತಿಸಲಾಯಿತು.

9. ಸಾಕ್ಷಿಗೆ ಇನ್ನೆರಡು ಛಾಯಚಿತ್ರಗಳನ್ನು ತೋರಿಸಿ ಅದರಲ್ಲಿ ಈಗ ನಾನು ಹೊಸದಾಗಿ ಕಟ್ಟಡವನ್ನು ಕಟ್ಟುತ್ತಿದ್ದು ಸದರಿ ಕಟ್ಟಡವು ಪ್ರತಿವಾದಿ ಹೊನ್ನಮ್ಮನ ಆಸ್ತಿಯ ಪೂರ್ವ ದಿಕ್ಕಿಗೆ ಬರುತ್ತದೆ ಎಂದರೆ ಸರಿ. ನನ್ನ ಆಸ್ತಿಯನ್ನು ನಾನು ಸಿಂಡಿಕೇಟ್ ಬ್ಯಾಂಕ್ ಎಸ್.ಎಲ್.ವಿ. ಕಂಪ್ಯೂಟರ್ ವರ್ಕ್ಸ್, ಕಾನ್ ಕಾನ್ ಹ್ಯಾಗ್ರೋ ಇವರಿಗೆ ಬಾಡಿಗೆಗೆ ಕೊಟ್ಟಿದ್ದೇನು ಎಂದರೆ ಸರಿ. ಸಾಕ್ಷಿಯು ಎರಡು ಛಾಯ ಚಿತ್ರಗಳನ್ನು ನೋಡಿ ಗುರುತಿಸಿದ ಮೇರೆ ಅವುಗಳನ್ನು ನಿ.ಡಿ.2 ಮತ್ತು 3 ಅಂತ ಗುರುತಿಸಲಾಯಿತು. ನಿ.ಡಿ.1 ರಲ್ಲಿ ಕಾಣಿಸುವ ಕಲ್ಲು ಬಂಡೆಯ ಪೂರ್ವ ದಿಕ್ಕಿಗೆ ಇರುವ 1 ವರೆ ಅಡಿ ಜಾಗ ಮತ್ತು ರಾಗಿ ಮರ(ನೆರಳು ಮರ) ಪ್ರತಿವಾದಿ ಹೊನ್ನಮ್ಮಳಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ನಿ.ಡಿ.1 ರಲ್ಲಿ ಕಾಣಿಸುವಂತೆ ನಾನು ಪ್ರತಿವಾದಿ ಹೊನ್ನಮ್ಮ ಮತ್ತು ನಮ್ಮ ಆಸ್ತಿಗಳ ನಡುವೆ ಮಧ್ಯೆ ಇದ್ದಂತಹ ಕಲ್ಲು ಬಂಡೆಗಳನ್ನು ಕೀಳಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ನಿ.ಡಿ.1 ರಲ್ಲಿ ಕಾಣಿಸುವಂತೆ ನಾನು ಹೊಸದಾಗಿ ಗೋಡೆಯನ್ನು ಕಟ್ಟಿಸಿ ಅಲ್ಲಿ ಡ್ರೈನೇಜ್ ಪೈಪ್ ನ್ನು ಇಡಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸಾಕ್ಷಿಯು ನನ್ನ ಜಾಗದಲ್ಲಿ ಇಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಮ್ಮ ಡ್ರೈನೇಜ್ ಪೈಪ್ ಹೊಡೆದು ಹೋಗಿ ನೀರು ಪ್ರತಿವಾದಿ ಹೊನ್ನಮ್ಮನ ಆಸ್ತಿಯ ಕಡೆ ಬರುತ್ತಿತ್ತು ಎಂದರೆ ಸಾಕ್ಷಿಯು ಹೊಡೆದು ಹೋಗಿದ್ದು ನಿಜ, ಆದರೆ ಅದೇ ದಿನ ಸರಿಪಡಿಸುತ್ತೇನೆ ಎಂದು ನುಡಿಯುತ್ತಾರೆ.

10. ನಾನು ಬಂಡೆಗಳನ್ನು ಕಿತ್ತು ಗೋಡೆಯ ಪಕ್ಕದಲ್ಲಿ ಡ್ರೈನೇಜ್ ಪೈಪ್ ಹಾಕಲು ಪ್ರಯತ್ನಪಟ್ಟಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಜಾಗದಲ್ಲಿ ಡ್ರೈನೇಜ್ ಪೈಪ್ ಹಾಕಬೇಡಿ ಎಂದು ನನಗೆ ಸಾಕಷ್ಟು ಬಾರಿ ಕೇಳಿಕೊಂಡರು ಎಂದರೆ ಸರಿಯಲ್ಲ.

ಆವಾಗ ನಾನು ಓ.ಎಸ್.210/2012 ರಂತೆ ದಾವೆಯನ್ನು ದಾಖಲಿಸಿ ನ್ಯಾಯಾಲಯದಿಂದ ನಿರೋದಾಜ್ಞೆ ತೆಗೆದುಕೊಂಡಿರುತ್ತೇನೆ, ಆದ್ದರಿಂದ ನಿಮಗೆ ಕೇಳಲು ಬರುವುದಿಲ್ಲವೆಂದು ಪ್ರತಿವಾದಿಯವರನ್ನು ಹೆದರಿಸಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯವರಿಗೆ ಸೇರಿದ ಜಾಗದಲ್ಲಿ ನಾನು ಅಕ್ರಮವಾಗಿ ಕಟ್ಟಡ ಕಟ್ಟುವುದನ್ನು ಮುಂದುವರೆಸಿರುತ್ತೇನೆ ಎಂದರೆ ಸರಿಯಲ್ಲ.

11. ನನಗೆ ಚಳ್ಳಕೆರೆ ನಗರಸಭೆಯವರು ನೀಡಿರುವ ಪರವಾನಿಗೆ ಪ್ರಕಾರವಾಗಿ ಕಟ್ಟಡವನ್ನು ಕಟ್ಟದೇ ನನ್ನ ಪೂರ್ತಿ ಜಾಗದಲ್ಲಿ ಸೆಟ್‌ಬ್ಯಾಕ್ ಜಾಗವನ್ನು ಬಿಡದೇ ಕಟ್ಟಡವನ್ನು ಕಟ್ಟಿ ಅದರಲ್ಲೂ ಪ್ರತಿವಾದಿಯವರಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡಿ ಕಟ್ಟಡ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಗಾಳಿ ಬೆಳಕಿಗೋಸ್ಕರ ಯಾರಾದರೂ ಕಟ್ಟಡ ಕಟ್ಟುವಾಗ 5 ಅಡಿ ಜಾಗವನ್ನು ಬಿಡಬೇಕಾಗುತ್ತದೆ ಎಂದರೆ ಸಾಕ್ಷಿಯು ಅವರು ಸಹ ಪೂರ್ವ ದಿಕ್ಕಿನಲ್ಲಿ ಎಷ್ಟು ಜಾಗವನ್ನು ಬಿಟ್ಟು ಕಟ್ಟಡ ಕಟ್ಟಿರುತ್ತಾರೋ ನಾನು ಸಹ ಅಷ್ಟೇ ಜಾಗವನ್ನು ಬಿಟ್ಟು ಕಟ್ಟಡ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಡಿ.1 ರಲ್ಲಿ ಕಾಣಿಸುವಂತೆ ಪ್ರತಿವಾದಿಯವರು ತಮ್ಮ ಕಟ್ಟಡದ ಪೂರ್ವ ದಿಕ್ಕಿನಲ್ಲಿ ಖಾಲಿ ಜಾಗವನ್ನು ಬಿಟ್ಟು ತದನಂತರ ತಮ್ಮ ಜಾಗದಲ್ಲಿ ಬಂಡೆ ಕಲ್ಲುಗಳನ್ನು ಊತಿರುತ್ತಾರೆ ಎಂದರೆ ಸರಿಯಲ್ಲ. ಪ್ರತಿವಾದಿಯವರು ಅವರ ಜಾಗದ ಪೂರ್ವ ದಿಕ್ಕಿನಲ್ಲಿ ಯಾವುದೇ ಕಟ್ಟಡವನ್ನು ಕಟ್ಟಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ದಕ್ಷಿಣ ದಿಕ್ಕಿನಲ್ಲಿ ಕಟ್ಟಿರುತ್ತಾರೆ ಎಂದು ನುಡಿಯುತ್ತಾರೆ. ದಕ್ಷಿಣ ದಿಕ್ಕಿನಲ್ಲಿ ಎಷ್ಟು ಅಡಿ ಉದ್ದ ಅಗಲ ಕಟ್ಟಡವನ್ನು ಪ್ರತಿವಾದಿಯವರು ಕಟ್ಟಿರುತ್ತಾರೆ ಎಂದರೆ ಸಾಕ್ಷಿಯು 12-13 ಅಡಿ ಕಟ್ಟಿರಬಹುದು ಎಂದು ನುಡಿಯುತ್ತಾರೆ.

12. ನಿ.ಪಿ.4 ರಲ್ಲಿ ಕಾಣಿಸುವಂತೆ ತೆಂಗಿನ ಮರ, ಸ್ಟೇರ್ ಕೇಸ್ ಮತ್ತು ಹಸಿರು ಬಣ್ಣದ ಕೊಡ ಇರುವ ತನಕ ಪ್ರತಿವಾದಿಯವರಿಗೆ ಸೇರಿದ ಖಾಲಿ ಜಾಗ ಆಗಿರುತ್ತದೆ ಎಂದರೆ ಸರಿಯಲ್ಲ. ನಾನು ಕಟ್ಟಿಸುವ ಕಟ್ಟಡದ ಪೂರ್ವದಲ್ಲಿ ವಾದಿಯರಿಗೆ ಸೇರಿದ ಸ್ಟೇರ್ ಕೇಸ್ ಇದ್ದು ಅದನ್ನು ನಾನು ಕಟ್ಟಿಸುವ ಕಟ್ಟಡದ ಮುಂಚಿತವಾಗಿಯೇ ಕಟ್ಟಿಸಿರುತ್ತಾರೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು 1 ವರೆ ಅಡಿ ಜಾಗ ಬಿಟ್ಟು ಕಟ್ಟಿರುವುದಕ್ಕೆ ನಾನು ಸಹ 1 ವರೆ ಅಡಿ ಜಾಗ ಬಿಟ್ಟು ಕಟ್ಟಡ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ನಿ.ಪಿ.4 ರಲ್ಲಿ ಕಾಣಿಸುವಂತೆ ನನಗೆ ಸೇರಿದ ಖಾಲಿ ಜಾಗ ಇಲ್ಲ, ಹಸಿರು ಬಣ್ಣದ ಕೊಡ ಇರುವ ಖಾಲಿ ಜಾಗವು ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ. ಹಸಿರು ಬಣ್ಣದ ಕೊಡ ಇರುವ 1 ವರೆ ಅಡಿ ಖಾಲಿ ಜಾಗವು ನನಗೆ ಸೇರಿರುತ್ತದೆ ಅಂತ ತೋರಿಸಲು ನಾನು ಯಾವುದೇ ದಾಖಲೆಯನ್ನು ಹಾಜರುಪಡಿಸಲು ಎಂದರೆ ಸರಿಯಲ್ಲ. ಕಲ್ಲು ಬಂಡೆಯಿಂದ ಪೂರ್ವಕ್ಕೆ ಇರುವ ಅಂದರೆ ಹಸಿರು ಬಣ್ಣದ ಕೊಡ ಇರುವ 1 ವರೆ ಅಡಿ ಜಾಗವು ವಾದಿಗೆ ಸೇರಿರುತ್ತದೆ ಎಂದರೆ ಸರಿಯಲ್ಲ.

13. ನಿ.ಪಿ.5 ರಲ್ಲಿ ಕಾಣಿಸುವಂತೆ ನಾನು ಪ್ರತಿವಾದಿಗೆ ಸೇರಿದ ಜಾಗದಲ್ಲಿ ಡ್ರೈನೇಜ್ ಪೈಪ್ ಮತ್ತು ಡ್ರೈನೇಜ್ ಕಂಪಾರ್ಟ್ಮೆಂಟ್ ಅಕ್ರಮವಾಗಿ ಕಟ್ಟಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ಜಾಗದಲ್ಲಿ ನಾನು ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ಡ್ರೈನೇಜ್ ಕಂಪಾರ್ಟ್ಮೆಂಟ್ ಕಟ್ಟಬೇಡಿ ಅಂತ ನನಗೆ ಪ್ರತಿವಾದಿಯವರು ಸಾಕಷ್ಟು ಬಾರಿ ಕೇಳಿಕೊಂಡಿದ್ದರು ಎಂದರೆ ಸರಿಯಲ್ಲ. ಈ ಕುರಿತು ಪೊಲೀಸರಿಗೆ ದೂರನ್ನು ಪ್ರತಿವಾದಿಯವರು ಕೊಟ್ಟಿದ್ದು ನಮ್ಮನ್ನು ಪೊಲೀಸರು ಠಾಣೆಗೆ ದಿನಾಂಕ.14.08.2015 ರಂದು ಕರೆಸಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು ಪ್ರತಿವಾದಿಯವರದು ತಪ್ಪು ಇದೇ ಎಂದು ಅವರಿಗೆ ಹೇಳಿ ಕಳಿಸಿದರು ಎಂದು ನುಡಿಯುತ್ತಾರೆ. ನಗರಸಭೆ ನೀಡಿರುವ ಪರವಾನಿಗೆ ಪ್ರಕಾರವಾಗಿ ಮತ್ತು ಪ್ರತಿವಾದಿಯವರಿಗೆ ಸೇರಿದ ಜಾಗವನ್ನು ಒತ್ತುವರಿ ಮಾಡದೇ ಕಟ್ಟಡ ಕಟ್ಟಲು ನನಗೆ ತಿಳುವಳಿಕೆ ಹೇಳಿದ್ದರು ಎಂದರೆ ಸರಿಯಲ್ಲ. ಪೊಲೀಸರು ದಿನಾಂಕ.14.08.2015 ರಂದು ವ್ಯಾಜ್ಯವು ಸಿವಿಲ್ ಸ್ವರೂಪದಾಗಿರುತ್ತದೆ ಎಂದು ಹಿಂಬರಹ ನೀಡಿದ್ದರು ಎಂದರೆ ಸರಿ. ಸಾಕ್ಷಿಯು ಮುಂದುವರೆದು 2012 ರಲ್ಲಿಯೇ ಕಟ್ಟಡ ಕಟ್ಟುವುದು ಮುಗಿದಿತ್ತು ಎಂದು ನುಡಿಯುತ್ತಾರೆ. 2012 ನೇ ಇಸವಿಯಲ್ಲಿಯೇ ಕಟ್ಟಡ ಕಟ್ಟುವುದು ಮುಗಿದಿತ್ತು ಅಂತ ಹೇಳುವುದು ಸುಳ್ಳು ಎಂದರೆ ಸರಿಯಲ್ಲ.

14. ನನ್ನ ವಿರುದ್ಧ ಪ್ರತಿವಾದಿ ಹೊನ್ನಮ್ಮ ಚಿತ್ರದುರ್ಗ ನಗರಾಭಿವೃದ್ಧಿ ಇಖಾಲೆಗೂ ಸಹ ದೂರನ್ನು ನೀಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಚಿತ್ರದುರ್ಗ ನಗರಾಭಿವೃದ್ಧಿ ಅಧಿಕಾರಿಗಳು ವ್ಯಾಜ್ಯದ ಸ್ವತ್ತಿಗೆ ಬಂದಿದ್ದರು ಎಂದರೆ ಸರಿಯಲ್ಲ. ಚಿತ್ರದುರ್ಗ ನಗರಾಭಿವೃದ್ಧಿ ಅಧಿಕಾರಿಗಳು ವ್ಯಾಜ್ಯದ ಸ್ವತ್ತಿಗೆ ಬಂದು ಪರವಾನಿಗೆ ಪ್ರಕಾರ ಕಟ್ಟಡ ಕಟ್ಟಲು ನನಗೆ ತಿಳುವಳಿಕೆ ಹೇಳಿರುತ್ತಾರೆ ಎಂದರೆ ಸರಿಯಲ್ಲ.

15. ದಿನಾಂಕ.02.02.2005 ರವರೆಗೆ ದಾವಾ ಸ್ವತ್ತಿಗೆ ನಾನು ಮಾಲೀಕನಾಗಿರಲಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಅದು ನಮ್ಮ ಒಟ್ಟು ಕುಟುಂಬದ ಆಸ್ತಿ ಆಗಿದ್ದು, ಪಾಲುವಿಭಾಗ ಪತ್ರದಂತೆ ನನ್ನ ಭಾಗಕ್ಕೆ ಬಂದಿರುತ್ತದೆ ಎಂದು ನುಡಿಯುತ್ತಾರೆ. 2005 ರವರೆಗೆ ವಾದ ಪತ್ರದ ಸ್ವತ್ತು ಸಂಪೂರ್ಣ ಖಾಲಿ ಇತ್ತು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ಮನೆ ಇದ್ದು, ಅದನ್ನು ಕೆಡವಿ ಹೊಸದಾಗಿ ಕಟ್ಟಿರುತ್ತೇನೆ ಎಂದು ನುಡಿಯುತ್ತಾರೆ. ವಾದ ಪತ್ರದ ಸ್ವತ್ತಿನಲ್ಲಿ ಮೊದಲು ಮನೆ ಇದ್ದ ಕುರಿತು ನಾನು ಯಾವುದೇ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿ. ಹಳೇ ಮನೆಯನ್ನು ಕೆಡವಿ ಹೊಸದಾಗಿ ಮನೆ ಕಟ್ಟಿಸಿರುತ್ತೇನೆ ಎಂದು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಹೊಸ ಮನೆಯನ್ನು ಕಟ್ಟಿಸಲು ಯಾವ ತಾರೀಖು, ತಿಂಗಳು ಮತ್ತು ವರ್ಷದಂದು ಪರವಾನಿಗೆಯನ್ನು ಪಡೆದಿರುತ್ತೇನೆ ಅಂತ ಹೇಳಲು ಈಗ ನೆನಪಿರುವುದಿಲ್ಲ. ಪರವಾನಿಗೆಯನ್ನು ನಗರಸಭೆಯಿಂದ ತೆಗೆದುಕೊಂಡಿರುತ್ತೇನೆ.

16. ಪರವಾನಿಗೆಯನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೀನಾ ಎಂದರೆ ಸಾಕ್ಷಿಯು ದಾಖಲೆಗಳನ್ನು ನೋಡಿ ನನಗೆ ಗೊತ್ತಾಗುತ್ತಿಲ್ಲ ಇಲ್ಲದಿದ್ದರೆ ಮುಂದಿನ ತಾರೀಖನಲ್ಲಿ ತಂದು ಕೊಡುತ್ತೇನೆ ಎಂದು ನುಡಿಯುತ್ತಾರೆ.

**(ಪ್ರತಿವಾದಿ ಪರ ವಕೀಲರ ಕೋರಿಕೆಯ ಮೇರೆಗೆ ಮುಂದುವರೆದ ಪಾಟೀ ಸವಾಲನ್ನು ಮುಂದೂಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ.ಹೇ.ಕೇ.ಸರಿಯಿದೆ,

ಅಪರ ಸಿವಿಲ್ ಮತ್ತು ಜೆ.ಎಂ.ಎಫ್.ಸಿ.,
ನ್ಯಾಯಾಧೀಶರು, ಚಳ್ಳಕೆರೆ.